
# ರಿಯೊ ಕಾರ್ನಿವಲ್

## ಕಾಮನಬಿಲ್ಲುಗಳ ಜಂಬೂಸವಾರಿ




**ಬ್ರೆಜಿಲ್‌ನ 'ರಿಯೊ ಕಾರ್ನಿವಲ್' ವಿಶ್ವದ ಬಹು ದೊಡ್ಡ ಸಾಂಸ್ಕೃತಿಕ ಹಬ್ಬಗಳಲ್ಲೊಂದು. ಫೆಬ್ರುವರಿ 28ರಿಂದ ಮಾರ್ಚ್ 8ರವರೆಗೆ ನಡೆಯುವ ಈ ಹಬ್ಬ, ಕಲೆ–ಸಂಸ್ಕೃತಿಯೊಂದಿಗೆ ಮೋಜು ಮಸ್ತಿಯನ್ನೂ ಮಿಳಿತಗೊಳಿಸುವ ಅನ್ಯಾದೃಶ ಸಂಭ್ರಮ.**

**■ ಡಿ.ಜಿ. ಮಲ್ಲಿಕಾರ್ಜುನ**

'ಸಾಂಬಾ' ಸಂಗೀತದ ಕಂಪನಕ್ಕೆ ಇಡೀ ನಗರವೇ ಮಿಡಿಯುತ್ತದೆ. ಅದ್ದೂರಿಯಾದ, ವರ್ಣಾಲಂಕೃತವಾದ, ಸಂದೇಶವನ್ನೊಳಗೊಂಡ, ನೂರಾರು ಕಲಾವಿದರನ್ನೊಳಗೊಂಡ, ಬೃಹತ್ ಗಾತ್ರದ ಆಕೃತಿಗಳು, ಅಲಂಕೃತವಾದ ಬೃಹತ್ ಪರೇಡ್ ರಸ್ತೆಯಲ್ಲಿ ಸಾಗುತ್ತದೆ. ಆ ಆಕೃತಿಯ ಮೇಲೆ–ಕೆಳಗೆ ಮಿನುಗುವ ಗರಿಗಳಿಂದ ಅಲಂಕೃತಗೊಂಡ ಉತ್ಸಾಹದ ಬುಗ್ಗೆಯಂತಿರುವ ನೃತ್ಯಗಾರ್ತಿಯರು ಪ್ರೇಕ್ಷಕರಲ್ಲಿಯೂ ಉತ್ಸಾಹವನ್ನು ಬಡಿದೆಬ್ಬಿಸುತ್ತಾರೆ. ಕೈಪಿರಿನ್ಹಾ (ಬ್ರೆಜಿಲಿನ ಪ್ರಸಿದ್ಧ ಕಾಕ್‌ಟೇಲ್) ಮತ್ತು ಬಿಯರ್ ಹೊಳೆಯಂತೆ ಹರಿಯುತ್ತಿರುತ್ತದೆ. ಲಯಬದ್ಧವಾಗಿ ಬಡಿಯುತ್ತಿರುವ ಡ್ರಮ್ ನಿನಾದಕ್ಕೆ ಜನರು ಹುಚ್ಚೆದ್ದು ಕುಣಿಯುತ್ತಾರೆ.

ದಕ್ಷಿಣ ಅಮೆರಿಕದ ಬ್ರೆಜಿಲ್ ದೇಶದಲ್ಲಿ ನಡೆಯುವ ಕಾರ್ನಿವಲ್ ರೀತಿಯ ಮತ್ತೊಂದು ವರ್ಣಮಯ ಆಚರಣೆ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಪಂಚೇಂದ್ರಿಯಗಳನ್ನು ಹುಚ್ಚೆಬ್ಬಿಸುವ ವಿಶೇಷವಾದ ಆಚರಣೆಯಿದು. ಹಗಲು ರಾತ್ರಿಯನ್ನು ಒಂದುಗೂಡಿಸುವ, ಎಲ್ಲೆಡೆ ಮಾದಕತೆಯನ್ನು ಸ್ಫುರಿಸುವ ಸಂಗೀತ, ನೃತ್ಯ, ವಿಶೇಷ ವೇಷ ಭೂಷಣಗಳ ಪ್ರದರ್ಶಕತೆಯ ಪರಾಕಾಷ್ಠೆಯ ಉನ್ಮತ್ತ ಸಂಭ್ರಮಾಚರಣೆಯಿದು.

ದಕ್ಷಿಣ ಅಮೆರಿಕ ಖಂಡದ ಎರಡನೇ ದೊಡ್ಡ ನಗರ ಮತ್ತು ಬ್ರೆಜಿಲ್ ದೇಶದ ರಾಜಧಾನಿ ರಿಯೊ ಡಿ ಜನ್ಯೆರೊ ಸಾಂಬಾ ನೃತ್ಯದ ತವರೂರು. ಈ ವರ್ಷ ಫೆಬ್ರುವರಿ 28ರಿಂದ ಮಾರ್ಚ್ 8ರವರೆಗೆ ರಿಯೊ ನಗರದಲ್ಲಿ



